ಹುದ್ದೆಗಳಲ್ಲಿಯೂ ವೈದ್ಯರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ, ಆಕುಕ 210 ಆಯೋಸಂ 94 ದಿನಾಂಕ: 3-11-95 ರಲ್ಲಿ ಹೆಚ್ಚುವರಿಯಾಗಿ 1 ವೈದ್ಯ ಹುದ್ದೆ ಹಾಗೂ 1 ದಂತ ವೈದ್ಯರ ಹುದ್ದೆ ಹಾಗೂ 1 ಸ್ಟಾಫ್ ನರ್ಸ್ ಹುದ್ದೆ ಮಂಜೂರಾಗಿರುತ್ತದೆ. ಹೊಸದಾಗಿ ಮಂಜೂರಾದ ಹುದ್ದೆಗಳನ್ನು ಮುಂಬರುವ ದಿನಗಳಲ್ಲಿ ಆದ್ಯತೇ ಮೇಲೆ ಭರ್ತಿ ಮಾಡಲಾಗುವುದು.

ಕ್ಷಕಿರಣ ಯಂತ್ರಗಳನ್ನು ಖರೀದಿಸುವುದು ಆಯಾ ಜಿಲ್ಲಾ ಪಂಚಾಯತಗಳ ಆಡಳಿತಕ್ಕೆ ಒಳಪಟ್ಟಿದ್ದರಿಂದ 1993-94ನೇ ಸಾಲಿನ ಕ್ಷಕಿರಣ ಯಂತ್ರದ ದರ ಗುತ್ತಿಗೆಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಕಳುಹಿಸಿ ಕೊಡಲಾಗಿತ್ತು ಹಾಗೂ 1994-95ನೇ ಸಾಲಿನಲ್ಲಿ ಕ್ಷ ಯಂತ್ರದ ದರ ಗುತ್ತಿಗೆಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಕಳುಹಿಸಿ ಕೊಡಲಾಗಿತ್ತು ಹಾಗೂ 1994-95ನೇ ಸಾಲಿನಲ್ಲಿ ಕ್ಷ ಕಿರಣ ಯಂತ್ರಗಳಿಗೆ ದರ ಗುತ್ತಿಗೆ ನಿಗಧಿಪಡಿಸಲು ಈ ನಿರ್ದೇಶನಾಲಯದಿಂದ ಅಧಿಕೃತ ಪ್ರಕಟಣೆ ಕರೆಯಾಗಿದ್ದು ಇದರ ದರಗುತ್ತಿಗೆ ನಿಗಧಿಪಡಿಸುವುದು ಅಂತಿಮ ಹಂತದಲ್ಲಿ ಇರುತ್ತದೆ. ಇದು ನಿಗದಿಯಾದ ನಂತರ ಇದರ ಪ್ರತಿಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದು.

4.40 ಪಿ.ಎಂ.

(ಉ) ಆರಾಧನಾ ಯೋಜನೆಯಡಿಯಲ್ಲಿ ಹಣವನ್ನು ಒದಗಿಸುವ ಬಗ್ಗೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೆ, ಕಳೆದ ಕೆಲವು ವರ್ಷಗಳಿಂದ ಆರಾಧನಾ ಯೋಜನೆಯ ಪ್ರಕಾರ ಹಿಂದುಳಿದ ವರ್ಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ವಾಸ್ತವ್ಯಾವಿರುವ ಪ್ರದೇಶದಲ್ಲಿರುವ ಅಜೀರ್ಣಾವಸ್ಥೆಯಲ್ಲಿರುವ ಮಂದಿರಗಳ ನಿರ್ಮಾಣಕ್ಕೆ ಹಣ ಒದಗಿಸುವ ವ್ಯವಸ್ಥೆ ಇತ್ತು. ಹಣವನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸದರಿ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆರಾಧನಾ ಸಮಿತಿಯ ಮೂಲಕ ಒದಗಿಸಲಾಗುತ್ತಿತ್ತು. ಆದರೆ ಹೊಸ ಸರ್ಕಾರ ಬಂದಮೇಲೆ ಈ ಯೋಜನೆ ಸಂಪೂರ್ಣ ಸ್ಥಗಿತಗೊಂಡಿದೆ. ಮಾನ್ಯ ಕಂದಾಯ ಸಚಿವರಿಂದ ಆರಾಧನಾ ಯೋಜನೆಯ ಬಗ್ಗೆ ಪತ್ರ ಬಂದಿದ್ದರೂ ಕೆಲಸ ನಡೆಯುತ್ತಾ ಇಲ್ಲ. ಈ ಯೋಜನೆಯ ಪರಿಸ್ಥಿತಿ ಏನು? ಆರಾಧನಾ ಯೋಜನೆ ಇದೆಯೇ? ಆರಾಧನಾ ಸಮಿತಿ ರಚಿಸಲಾಗಿದೆಯೇ? ರಚಿಸಲಾಗಿಲ್ಲವಾದರೆ ಯಾವ ರೀತಿ ಯಾವಾಗ ರಚಿಸಲಾಗುವುದು. ಈ ಬಗ್ಗೆ ಮಾನ್ಯ ಕಂದಾಯ ಸಚಿವರು ಮಾಹಿತಿ ಒದಗಿಸಬೇಕಾಗಿ ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಆರಾಧನಾ ಯೋಜನೆಯಡಿಯಲ್ಲಿ ಹಿಂದಿನ ವರ್ಷಗಳಲ್ಲಿ ಈ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ.

1991-92	ರೂ.	5.00 ಕೋಟಿ
1992-93	ರೂ.	5.00 ಕೋಟಿ
1993-94	ರೂ.	8.00 ಕೋಟಿ
1994-95	ರೂ.	6.71 ಕೋಟಿ

1995-96 ರಲ್ಲಿ 5.00 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು. ಆರಾಧನಾ ಯೋಜನೆ ಹಣವನ್ನು ವಿಧಾನ ಸಭಾ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲಾಗುವುದು. 1994-95 ರಲ್ಲಿ ಆಗ ಅಸ್ತಿತ್ವದಲ್ಲಿದ್ದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರದ್ದುಪಡಿಸಿ ಸರ್ಕಾರವು ವಿಧಾನ ಸಭಾ ಕ್ಷೇತ್ರವಾರು ಸಮಿತಿಗಳನ್ನು ರಚಿಸಬೇಕೆಂದು ನಿರ್ಧರಿಸಿದ್ದರಿಂದ ಆ ವರ್ಷದಲ್ಲಿ ಬಿಡುಗಡೆಯಾದ ಹಣ ಖರ್ಚಾಗಿರುವುದಿಲ್ಲ ಈ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದು ಪ್ರಸ್ತುತ ಸಮಿತಿಗಳ ಶಿಫಾರಸ್ಸಿನಂತೆ ಅದನ್ನು ಉಪಯೋಗಿಸಿಕೊಳ್ಳಲಾಗುವುದು.

ಆರಾಧನಾ ಯೋಜನೆಯ ಕಾರ್ಯಕ್ರಮವನ್ನು ತ್ವರಿತಗೊಳಿಸುವ ಸಲುವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎರಡು ಸಮಿತಿಗಳ ಬದಲಿಗೆ ವಿಧಾನ ಸಭಾ ಕ್ಷೇತ್ರಕ್ಕೆ ಒಂದೇ ಸಮಿತಿ ರಚಿಸಿದ್ದು ಈ ಸಮಿತಿಯ ಶಿಫಾರಸ್ಸಿನಂತೆ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಿದ ನಂತರ ತಹಶೀಲ್ದಾರರು ಕೆಲಸವನ್ನು ನಿರ್ವಹಿಸುತ್ತಾರೆ. ಈಗಾಗಲೇ177 ವಿಧಾನ ಸಭಾ ಕ್ಷೇತ್ರಗಳ ಸಮಿತಿಗಳನ್ನು ರಚಿಸಲಾಗಿದ್ದು, ಉಳಿದ ಕ್ಷೇತ್ರಗಳ ಸಮಿತಿಗಳನ್ನು ಸಹ ರಚಿಸಲಾಗುತ್ತಿದೆ.

(ಊ) ಯಲಹಂಕ ಕ್ಷೇತ್ರಕ್ಕೆ ಒಳಪಡುವ ಪ್ರದೇಶಗಳಲ್ಲಿ ಕರ್ನಾಟಕ ಕೊಳಚೆ ನಿರ್ಮೂಲ ಮಂಡಳಿವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮನೆಗಳು.

ಶ್ರೀ ವಿ. ಶಿವರಾಜ್ (ಯಲಹಂಕ) : ಮಾನ್ಯ ಅಧ್ಯಕ್ಷರೆ " ಯಲಹಂಕ ಮತಕ್ಷೇತ್ರಕ್ಕೆ ಒಳಪಡುವ ಸುಧಾಮನಗರ, ಕಾವಲಬೈರಸಂದ್ರ (ಎನ್.ಪಿ.ಫ್ಯಾಕ್ಟರಿ ಪಕ್ಕ) ಈ ಮೇಲ್ಕಂಡ ಸ್ಥಳಗಳಲ್ಲಿ ಕಳೆದ 1993 ರಿಂದ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮನೆಗಳು ಇದುವರೆವಿಗೂ ಸಹ ಕಾರ್ಯಗತವಾಗದೆ ಉಳಿದಿರುವುದಕ್ಕೆ ಕಾರಣವೇನು? ಈ ಬಗ್ಗೆ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಕೈಗೊಳ್ಳಲಿರುವ ಕ್ರಮವೇನು" ಎಂಬುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಯಲಹಂಕ ಕ್ಷೇತ್ರಕ್ಕೆ ಸೇರಿದ ಕಾವಲ್ ಬೈರಸಂಧ್ರ, ಎನ್.ಪಿ. ಫ್ಯಾಕ್ಟರಿ ಬಳಿ ಇರುವ ಸುಜಾನನ ನಗರ ಕೊಳಚೆ ಪ್ರದೇಶದಲ್ಲಿ ಮಂಡಳಿ ವತಿಯಿಂದ ಸುಮಾರು 100ಮನೆಗಳ ನಿರ್ಮಾಣಕ್ಕಾಗಿ ಒಟ್ಟು ರೂ. 37.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಗಳನ್ನು. 1992-93ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಂಡಳಿಯಿಂದ ಮಂಜೂರಾತಿಯನ್ನು ಪಡೆಯಲಾಯಿತು. ಈಗ ಮಂಡಳಿಯಲ್ಲಿ ಟಾಸ್ಕ ವರ್ಕ ವ್ಯವಸ್ಥೆಯಡಿಯಲ್ಲಿ (ತುಂಡು ಗುತ್ತಿಗೆ ಆಧಾರದ ಮೇಲೆ) ಜಾರಿಗೊಳಿಸಲಾಗಿದ್ದು ಸುಮಾರು 8 ಮಂದಿ ಗುತ್ತಿಗೆದಾರರಿಗೆ ಈ ಕೆಳಕಂಡ ಮನೆಗಳ ನಿರ್ಮಾಣ ಕಾರ್ಯವನ್ನು 1992ನೇ ನವೆಂಬರ್ ಮಾಹೆಯಲ್ಲಿ ವಹಿಸಿಕೊಡಲಾಯಿತು.